## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ .

## ಸಿಸಿ ನಂ.782/2023

**ಫಿರ್ಯಾದಿಃ** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ.

**-:: ವಿರುದ್ದ ::-**

**ಆರೋಪಿತರುಃ**

1. ಮಲ್ಲು ತಂದೆ ಭೀಮಶ್ಯಾ ಕ್ಷತ್ರಿ,
41 ವರ್ಷ, ಉಃ ಖಾಸಗಿ ಕೆಲಸ,
ವಾಸಃ ಮಾಶಾಳ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

2. ಯಲ್ಲಪ್ಪ ತಂದೆ ಭೀಮಶ್ಯಾ ಕ್ಷತ್ರಿ,
36 ವರ್ಷ, ಉಃ ಖಾಸಗಿ ಕೆಲಸ,
ವಾಸಃ ಮಾಶಾಳ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

4. ಭೀಮಶ್ಯಾ ತಂದೆ ರಮು ಕ್ಷತ್ರಿ ,
60 ವರ್ಷ, ಉಃ ಒಕ್ಕಲುತನ,
ವಾಸಃ ಮಾಶಾಳ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

5. ಇಟಾಬಾಯಿ ಗಂಡ ಭೀಮಶ್ಯಾ ಕ್ಷತ್ರಿ,
60 ವರ್ಷ, ಉಃ ಮನೆ ಕೆಲಸ,
ವಾಸಃ ಮಾಶಾಳ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

----

## ದೋ ಷಾ ರೋ ಪ ಣೆ

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 09.05.2022 ರಂದು ರಾತ್ರಿ 07-00 ಗಂಟೆ ಸುಮಾರಿಗೆ ಅಫಜಲಪೂರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಾಶಾಳ ಗ್ರಾಮದಲ್ಲಿ ಫಿರ್ಯಾದಿ ಚಾಸಾ-1 ಜ್ಯೋತಿಬಾ ರವರ ಮನೆಯ ಹತ್ತಿರ ಆರೋಪಿತರಾದ ನೀವು ಹಳೆ ವೈಷ್ಯಮ್ಯದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1, ಚಾಸಾ-4 ರಿಂದ 7 ಮತ್ತು

ಚಾಸಾ-10 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದಿದ್ದು, ಆ ಮೂಲಕ ನೀವು ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ರವರ ಮನೆಯ ಹತ್ತಿರ ಹಳೆ ವೈಷ್ಯಮ್ಯದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1, ಚಾಸಾ-4 ರಿಂದ 7 ಮತ್ತು ಚಾಸಾ-10 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ದೊಂಬಿ ಎಬ್ಬಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ.147 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ರವರ ಮನೆಯ ಹತ್ತಿರ ಹಳೆ ವೈಷ್ಯಮ್ಯದ ಹಿನ್ನಲೆಯಲ್ಲಿ ಫಿರ್ಯಾದಿ ಚಾಸಾ-1, ಚಾಸಾ-4 ರಿಂದ 7 ಮತ್ತು ಚಾಸಾ-10 ರವರಿಗೆ ಹೊಡೆಯುವ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಕೈಯಲ್ಲಿ ಕಬ್ಬು ಕಡಿಯುವ ಕೊಯ್ತಾ ಹಿಡಿದುಕೊಂಡು ಬಂದಿದ್ದು, ಆ ಮೂಲಕ ನೀವು ಭಾ.ದಂ.ಸಂ.148 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ರವರ ಮನೆಯ ಹತ್ತಿರ ಹಳೆ ವೈಷ್ಯಮ್ಯದ ಹಿನ್ನಲೆಯಲ್ಲಿ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 2ನೇ ಆರೋಪಿಯಾದ ನೀವು ಫಿರ್ಯಾದಿ ಚಾಸಾ-1, ಚಾಸಾ-4 ರಿಂದ 7 ಮತ್ತು ಚಾಸಾ-10 ರವರಿಗೆ "ಏ ರಂಡಿ ಮಕ್ಕಳ್ಯಾ ನಮ್ಮ ಬೇಕರಿಯವರಿಗೆ ನೀವು ಶಟರ್ ಬಾಡಿಗೆ ಕುಡತಿರಿ" ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಸ್ಥಳದಲ್ಲಿ ಅವಮಾನ ಪಡಿಸಿದ್ದು, ಫಿರ್ಯಾದಿ ಚಾಸಾ-1, ಚಾಸಾ-4 ರಿಂದ 7 ಮತ್ತು ಚಾಸಾ-10 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಫಿರ್ಯಾದಿ ಚಾಸಾ-1, ಚಾಸಾ-4 ರಿಂದ 7 ಮತ್ತು ಚಾಸಾ-10 ರವರನ್ನು ಉದ್ರೇಕಿಸಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆಗ ಮನೆಯಲ್ಲಿದ್ದ ಚಾಸಾ-1, ಚಾಸಾ-4 ರಿಂದ 7 ಮತ್ತು 10 ರವರು ಮನೆಯಿಂದ ಹೊರಗಡೆ ಬಂದು ಹಾಗೇಲ್ಲ ಬೈಯಬೇಡ ಅಂದಿದ್ದಕ್ಕೆ ನಿಮ್ಮಲ್ಲಿ 1ನೇ ಆರೋಪಿತನು ಚಾಸಾ-4 ದತ್ತು ರವರಿಗೆ ಸತುರಿಯಿಂದ ಬಲ ಕಪಾಳಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗುಪ್ತಗಾಯವನ್ನುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.324

ಸಹವಾಚಕ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಳೆ ವೈಷ್ಯಮ್ಯದ ಹಿನ್ನಲೆಯಲ್ಲಿ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 2ನೇ ಆರೋಪಿಯಾದ ನೀವು ಫಿರ್ಯಾದಿ ಚಾಸಾ-1 ಜ್ಯೋತಿಬಾ ರವರಿಗೆ ಕೈಯಿಂದ ಹೊಟ್ಟೆಗೆ, ಎದೆಗೆ ಗುದ್ದಿದನು ಮತ್ತು ಬಿಡಿಸಲು ಬಂದ ಚಾಸಾ-6 ಚೌಡಮ್ಮ ರವಳಿಗೆ ಕಾಲಿನಿಂದ ಜೋರಾಗಿ ಹೊಟ್ಟೆಯ ಮೇಲೆ ಒದ್ದು ಗಂಭಿರ ಗುಪ್ತಗಾಯಪಡಸಿದ್ದು, 2ನೇ ಆರೋಪಿತನು ಚಾಸಾ-4 ರವರಿಗೆ ಜೋರಾಗಿ ಕಾಲಿನಿಂದ ಹೊಟ್ಟೆಯ ಮೇಲೆ ಒದ್ದು, ಆಗ ಜಗಳ ಬಿಡಿಸಲು ಬಂದ ಚಾಸಾ-10 ಲಕ್ಷ್ಮಣ ರವರಿಗೆ 1ನೇ ಆರೋಪಿತನು ಕೈಯಿಂದ ಬೆನ್ನ ಮೇಲೆ ಗುದ್ದಿದನು, 5ನೇ ಆರೋಪಿತಳು ಚಾಸಾ-5 ನಿರ್ಮಲಾ ರವರಿಗೆ ರವರಿಗೆ ನೆಲಕ್ಕೆ ಹಾಕಿ ಕಾಲಿನಿಂದ ಬೆನ್ನ ಮೇಲೆ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ. 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

7. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಳೆ ವೈಷ್ಯಮ್ಯದ ಹಿನ್ನಲೆಯಲ್ಲಿ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 3ನೇ ಆರೋಪಿತನು ಚಾಸಾ-6 ಚೌಡಮ್ಮ ರವರ ತಲೆಯ ಮೇಲಿನ ಕೂದಲು ಹಿಡಿದು ಎಳೆದಾಡಿ ಹೆಣ್ಣುತನಕ್ಕೆ ಅವಮಾನಗೊಳಿಸಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 354(ಬಿ) ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

8. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಹಳೆ ವೈಷ್ಯಮ್ಯದ ಹಿನ್ನಲೆಯಲ್ಲಿ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಫಿರ್ಯಾದಿ ಚಾಸಾ-1, ಚಾಸಾ-4 ರಿಂದ 7 ಮತ್ತು ಚಾಸಾ-10 ರವರಿಗೆ ಬೇಕರಿಯವರಿಗೆ ಶಟರ್ ಬಾಡಿಗೆ ಕೊಟ್ಟರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

C.C.No.782/2023

## <u>1, 2, 4 ಮತ್ತು 5ನೇ ಆರೋಪಿತರ ಹೇಳಿಕೆ</u>

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಆ-4

ಆ-5

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

ಆ-4

ಆ-5

(ದೋಷಾರೋಪಣೆಯನ್ನು 1, 2, 4 ಮತ್ತು 5ನೇ ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 21.01.2026 ಪ್ರ.ದ.ನ್ಯಾ.ದಂ. ಅಫಜಲಪೂರ.